ದಿನಾಂಕ 28-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ಮತ್ತು 3 ನೇ ಎದುರುಗಾರರ ಪರ ಶ್ರೀ ಎಸ್.ಬಿ.ಕೆ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. 1 ನೇ ಅರ್ಜಿದಾರರು ಸಹ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಮನೆಯ ವ್ಯವಹಾರವನ್ನು ನನ್ನ ಮಗ ಬಸವರಾಜರವರು ನಡೆಸುತ್ತಾರೆ. 1 ನೇ ಅರ್ಜಿದಾರರು ಕೂಲಿ ಕೆಲಸ ಮಾಡುತ್ತಾರೆ. 1 ನೇ ಅರ್ಜಿದಾರರು ಅರೋಗ್ಯವಂತರಿದ್ದು, ದನ ಕರುಗಳನ್ನು ಮೇಯಿಸುತ್ತಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಕುಟುಂಬದಲ್ಲಿ ಮೊಮ್ಮಕ್ಕಳನ್ನು ಸೇರಿ ಒಟ್ಟು 16 ಜನ ಇರುತ್ತೇವೆ. ನನಗೆ ಮಂಜುನಾಥ ಎಂಬುವ ಮತ್ತೊಬ್ಬ ಮಗ ಇದ್ದಾನೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಇರುವ ಎಲ್ಲಾ ಸದಸ್ಯರು ಇಬ್ಬರನ್ನು ಹೊರತುಪಡಿಸಿ ಕೂಲಿ ಕೆಲಸಕ್ಕೆ ಹೊಗುತ್ತೇವೆ. ಕೂಲಿ ಕೆಲಸವನ್ನು ಗ್ರಾಮದ ಸುತ್ತಮುತ್ತಲೂ ಮತ್ತು ದೂರದ ಸ್ಥಳಗಳಲ್ಲಿಯೂ ಸಹ ಮಾಡುತ್ತೇವೆ. ದೂರದ ಸ್ಥಳಗಳಿಗೆ ಕೂಲಿ ಕೆಲಸಕ್ಕೆಹೋದರೆ ಸುಮಾರು 6 ತಿಂಗಳ ಕಾಲ ಗ್ರಾಮಕ್ಕೆ ಬರುವುದಿಲ್ಲ ಎಂದರೆ ಸರಿ.

2. ಕೂಲಿ ಕೆಲಸಕ್ಕೆ ಪರ ಸ್ಥಳಕ್ಕೆ ಒಂದು ವರ್ಷದಲ್ಲಿ ಮಳೆಗಾಲವನ್ನು ಹೊರತುಪಡಿಸಿ 2 ಬಾರಿ ಹೋಗುತ್ತೇವೆ. 2 ಬಾರಿ ಕೂಲಿ ಕೆಲಸಕ್ಕೆ ಹೋದಾಗ ಪ್ರತ್ಯೇಕ ಸ್ಥಳಗಳಿಗೆ ಹೋಗುತ್ತೇವೆ. 2021 ನೇ ಇಸವಿಯಲ್ಲಿ ಯಾವ ತಿಂಗಳುಗಳಲ್ಲಿ 2 ಬಾರಿ ಕೂಲಿ ಕೆಲಸಕ್ಕೆ ಯಾವ ಸ್ಥಳಗಳಿಗೆ ಹೋಗಿದ್ದೆ ಎಂದು ನೆನಪಿಲ್ಲ. ಅರ್ಜಿಯಲ್ಲಿ ನಾನು ಮತ್ತು ಕುಟುಂಬದ ಯಾವ ದಿನ, ತಿಂಗಳು ಮತ್ತು ವರ್ಷದಲ್ಲಿ ಹಾಗೂ ಯಾವ ಸ್ಥಳಗಳಿಗೆ 2021 ರಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದೆವು ಎಂದು ಬರೆಸಿರುವುದಿಲ್ಲ. ಈ ಅರ್ಜಿಗೆ ಸಂಬಂಧಿಸಿದಂತೆ ದಾಖಲಿಸಿದ್ದ ಮೂಲ ದಾವೆಯಲ್ಲಿ ಹೊರತುಪಡಿಸಿ ಇತರ ಪ್ರರಕಣಗಳಲ್ಲಿ ನಾನು ಹಾಜರಾಗುತ್ತಿರಲಿಲ್ಲ.



3.ಅಸಲು ದಾವಾ ಸಂಃ262/2014 ರ ದಾವೆಯನ್ನು ಈ ನ್ಯಾಯಾಲಯದಲ್ಲಿ ದಾಖಲಿಸುವ ಪೂರ್ವದಲ್ಲಿ 1 ನೇ ಅರ್ಜಿದಾರ, ನನ್ನ ಮಕ್ಕಳಾದ ಬಸವರಾಜ ಮತ್ತು ಮಂಜುನಾಥ ಹಾಗೂ ನನ್ನ ವಿರುದ್ದ ಆಡೂರು ಪೊಲೀಸ್ ಠಾಣೆಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ಸದರಿ ಪ್ರಥಮ ವರ್ತಮಾನ ವರದಿಯ ಆಧಾರದಲ್ಲಿ ಇದೇ ನ್ಯಾಯಾಲಯದಲ್ಲಿ ನನ್ನ

ಮತ್ತು ಸದರಿಯವರ ವಿರುದ್ದ ಕ್ರಿಮಿನಲ್ ಮೊಕದ್ದಮೆ ಸಂಃ 13/2015 ರ ಪ್ರಕರಣವು ದಾಖಲಾಗಿತ್ತು ಎಂದರೆ ಸರಿ. ಸದರಿ ಕ್ರಿಮಿನಲ್ ಮೊಕದ್ದಮೆಯಲ್ಲಿ ನಮ್ಮ ಪರವಾಗಿ ಅಸಲು ದಾವಾ ಸಂಃ 262/2014 ರ ದಾವೆಯನ್ನು ನಡೆಸುತ್ತಿದ್ದ ವಕೀಲರೇ ನಡೆಸುತ್ತಿದ್ದರು.

4. ಮಾನ್ಯ ಜಿಲ್ಲಾ ನ್ಯಾಯಾಧೀಶರು ಮಾಡಿದ ಆಡಳಿತಾತ್ಮಕ ಆದೇಶದಂತೆ ಸದರಿ ಕ್ರಿಮಿನಲ್ ಮೊಕದ್ದಮೆಯು ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಾನಗಲ್ಲ ಇದಕ್ಕೆ ವರ್ಗಾವಣೆ ಆಗಿತ್ತು ಎಂದರೆ ಸರಿ. ಸದರಿ ಕ್ರಿಮಿನಲ್ ಪ್ರರಕಣದಲ್ಲಿ ವರ್ಗಾವಣೆಗೊಂಡ ನಂತರ ಸುಮಾರು 4 ಬಾರಿ ಹಾಜರಾಗಿರುತ್ತೇವೆ. ಸದರಿ ಕ್ರಿಮಿನಲ್ ಮೊಕದ್ದಮೆಯು ಈಗಾಗಲೇ ಮುಕ್ತಾಯ ಗೊಂಡಿದ್ದು, ಯಾವ ವರ್ಷದಲ್ಲಿ ಮುಕ್ತಾಯಗೊಂಡಿರುತ್ತದೆ ಎಂದು ಗೊತ್ತಿಲ್ಲ. ದಿಃ 11-04-2022 ರಂದು ಸದರಿ ಕ್ರಿಮಿನಲ್ ಮೊಕದ್ದಮೆಯು ಮುಕ್ತಾಯಗೊಂಡಿರುತ್ತದೆ ಎಂದರೆ ಸರಿ.

5. ದಿಃ 11-08-2021 ರಿಂದ ದಿಃ 26-10-2021 ರವರೆಗೆ ಈ ನ್ಯಾಯಾಲಯವು ನನಗೆ ಸಾಕಷ್ಟು ಸಮಯಾವಕಾಶವನ್ನು ನೀಡಿದ್ದರೂ ಸಹ ಸಾಕ್ಷಿಯನ್ನು ನುಡಿಯಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಸ್ಥಳಗಳಿಗೆ ದುಡಿಯಲು ಹೋಗಿದ್ದೆ ಎಂದು ಸೂಕ್ತ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈ ಪ್ರಸ್ತುತ ಪ್ರಕರಣವು ಸಾಕ್ಷಿ ನುಡಿಯಲು ಬಾಕಿ ಇದ್ದಾಗ, ಸದರಿ ಕ್ರಿಮಿನಲ್ ಮೊಕದ್ದಮೆಯಲ್ಲಿ



ನಾನು, ನನ್ನ ಗಂಡ ಮತ್ತು ಮಕ್ಕಳು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆವು ಎಂದರೆ ನೆನಪಿಲ್ಲ. ಪ್ರಕರಣವನ್ನು ನಡೆಸುವಾಗ ವಕೀಲರ ದೂರವಾಣಿ ಸಂಖ್ಯೆಯನ್ನು ನನ್ನ ಮಕ್ಕಳು ಪಡೆದಿರುತ್ತಾರೆ. ಪ್ರಕರಣವನ್ನು ನಡೆಸಲು ಯಾವ ದಿನಾಂಕಗಳಂದು ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ನಾನಾಗಲೀ, ಅಥವಾ ನನ್ನ ಗಂಡ ಹಾಗೂ ಮಕ್ಕಳಾಗಲೀ ದೂರವಾಣಿ ಮೂಲಕ ಕರೆ ಮಾಡಿ ವಿವರ ಪಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾವು ದೂರದ ಊರುಗಳಿಗೆ ಕೆಲಸಕ್ಕೆ ಹೋಗಿದ್ದ ಕಾರಣ ವಿಚಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಕರಣಗಳ ಮುದ್ದತ್ತಿನ ದಿನಾಂಕಗಳನ್ನು ದೂರವಾಣಿ ಕರೆ ಮಾಡಿ ವಕೀಲರಿಂದ ಮಾಹಿತಿ ಪಡೆಯಲು ತೊಂದರೆ ಇತ್ತಾ ಎಂಬ ಸೂಚನೆಗೆ ಸಾಕ್ಷಿಯು ನಾವು ದೂರದ ಬೇಲೂರಿಗೆ ಕೆಲಸಕ್ಕೆ ಹೋಗಿದ್ದರಿಂದ ತಿಳಿದುಕೊಂಡಿರುವುದಿಲ್ಲ ಎಂದು

ನುಡಿಯುತ್ತಾರೆ.

6. ಅಸಲು ದಾವಾ ಸಂಃ 262/2014 ರ ದಾವೆಯು ಯಾವ ಕಾರಣಕ್ಕೆ ನಿಖಾಲೆ ಆಗಿರುತ್ತದೆ ಎಂದು ಮತ್ತು ಯಾವಾಗ ನಿಖಾಲೆ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ದಾವೆಯು ವಜಾ ಆಗಿದೆ ಎಂದು ನನಗೆ ಕಳೆದ 4-5 ತಿಂಗಳ ಹಿಂದೆ ಗೊತ್ತಾಗಿರುತ್ತದೆ. ಸದರಿ ದಾವೆಯು ವಜಾ ಆದ ಸುಮಾರು 4 ತಿಂಗಳ ಹಿಂದೆ ನಾನು ವಕೀಲರನ್ನು ಭೇಟಿ ಮಾಡಿರುತ್ತೇನೆ. ಸದರಿ ದಾವೆಯನ್ನು ಈ ನ್ಯಾಯಾಲಯವು ವಜಾ ಮಾಡಿದ ವಿಷಯವು ನನಗೆ ಎಂದು ಗೊತ್ತಾಗಿರುತ್ತದೆ ಎಂದು ಪ್ರಸ್ತುತ ಅರ್ಜಿಯಲ್ಲಾಗಲೀ ಅಥವಾ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲೀ ಮತ್ತು ನನ್ನ ಕುಟುಂಬದ ಇತರ ಸದಸ್ಯರಾಗಲೀ ನಾವು ವಾಸವಾಗಿರುವ ಗ್ರಾಮ ಮತ್ತು ಸುತ್ತಮುತ್ತಲಿನ ಹಳ್ಳಿಗಳನ್ನು ಹೊರತುಪಡಿಸಿ ದೂರದ ಊರುಗಳಿಗೆ ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ದಾವೆಯನ್ನು ಪುನಃ ಬೋರ್ಡಿಗೆ ತೆಗೆದುಕೊಳ್ಳುವ ಕಾರಣಕ್ಕೆ ದುಡಿಯಲು ಗೋವಾಕ್ಕೆ ಹೋಗಿದ್ದೆವು ಮತ್ತು ನಾವು ಆರ್ಥಿಕವಾಗಿ ಹಿಂದುಳಿದಿದ್ದೇವೆ ಎಂದು ಸುಳ್ಳು ಕಾರಣಗಳನ್ನು ಬರೆಸಲಾಗಿದೆ ಎಂದರೆ ಸರಿಯಲ್ಲ.



7. ಅಸಲು ದಾವ ಸಂಃ 262/2014 ರ ದಾವೆಯನ್ನು ವಜಾಗೊಳಿಸುವ ಪೂರ್ವದಲ್ಲಿ ನಾನಾಗಲೀ ಅಥವಾ ನನ್ನ ವಕೀಲರಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ವಿಚಾರಣಾ ದಿನಾಂಕವನ್ನು ಮುಂದೂಡವಂತೆ ಕೋರಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಕೀಲರು ಗೈರು ಹಾಜರಾದ ಕಾರಣಕ್ಕೆ ಈ ನ್ಯಾಯಾಲಯವು ಸರಿಯಾಗಿ ದಾವೆಯನ್ನು ವಜಾ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಮುಂದುವರೆಸಿದರೆ ಕೊನೆಯಲ್ಲಿ ಅದು ವಜಾಗೊಳ್ಳುತ್ತದೆ ಎಂದು ಅರಿತು, ನಾವು ವಿಚಾರಣಾ ದಿನಾಂಕಗಳಿಗೆ ಸರಿಯಾಗಿ ಹಾಜರಾಗದೇ ದಾವೆಯು ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ. ಎದುರುಗಾರರಿಗೆ ತೊಂದರೆ ನೀಡುವ ಉದ್ದೇಶಕ್ಕೆ ಮತ್ತೊಮ್ಮೆ ವಜಾಗೊಂಡ ದಾವೆಯನ್ನು ಪುನಃ ನಡೆಸಲು ಈ ಸುಳ್ಳು ಅರ್ಜಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ನಮಗೆ ಸಂಬಂಧಿಸಿದ ಮನೆಯ ಜಾಗವನ್ನು ಕೊಡುವಂತೆ ಸಲ್ಲಿಸಿರುತ್ತೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವ ಸಂಗತಿಗಳನ್ನು ಬರೆಸಲಾಗಿದೆ ಎಂದು ಗೊತ್ತಿಲ್ಲ. ನನ್ನ ಗಂಡ ಮತ್ತು ಮಕ್ಕಳು ನನ್ನ ಅನಕ್ಷರತೆಯ ದುರುಪಯೋಗಪಡಿಸಿಕೊಂಡು ಸುಳ್ಳು ಕಾರಣಗಳ ಮೇಲೆ ಈ ಖೊಟ್ಟಿ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ